**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 43/2025**

**ಸಾಕ್ಷಿದಾರರ ಹೆಸರು ಃ ಸಂದೀಪ್ ಸಿ.ಡಬ್ಲ್ಯೂಃ 1**
**ತಂದೆಯ ಹೆಸರು ಃ ರವಿನಾಯಕ್ ಪಿ.ಡಬ್ಲೂಃ 1**
**ವಯಸ್ಸು ಃ 45**
**ಉದ್ಯೋಗ ಃ ಕೃಷಿ**
**ವಾಸಸ್ಥಳ ಃ ಮಾರನಕುಡಿಗೆ**

**ದಿನಾಂಕಃ 07.07.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನಾನು ದಿನಾಂಕಃ 05.12.2024 ರಂದು ವೈಯಕ್ತಿಕ ಕೆಲಸದ ನಿಮಿತ್ತ ಚಿಕ್ಕಮಗಳೂರಿಗೆ ನಾನು ಮತ್ತು ನನ್ನ ಸ್ನೇಹಿತ ಚಾಸಾ-4 ರವರು ಹೋಗಿದ್ದೆವು. ನಾವು ಅದೇ ದಿನ ಚಿಕ್ಕಮಗಳೂರಿನಿಂದ ವಾಪಸ್ಸು ಶೃಂಗೇರಿಗೆ ಬರುತ್ತಿರುವಾಗ್ಗ ಬಾಳೆಹೊನ್ನೂರಿನ ಬಳಿ ಚಾಸಾ-5 ರವರು ತಾನು ಸಹ ಕಾರಿನಲ್ಲಿ ಶೃಂಗೇರಿಗೆ ಬರುತ್ತಿರುವುದಾಗಿ ತಿಳಿಸಿ ಒಟ್ಟಿಗೆ ಕಾರಿನಲ್ಲಿಯೇ ಹೋಗೋಣ ಎಂದು ನಮಗೆ ಫೋನ್ ಕರೆ ಮೂಲಕ ತಿಳಿಸಿದರು. ಆ ಕಾರಣ ನಾನು ಮತ್ತು ಚಾಸಾ-4 ರವರು ಬಾಳೆಹೊನ್ನೂರು ಸರ್ಕಲ್ ಬಳಿ ಬಸ್ಸಿನಿಂದ ಇಳಿದು ಊಟಕ್ಕಾಗಿ ಸೌಂದರ್ಯ ಹೋಟೆಲ್ ಬಳಿ ಹೋಗುತ್ತಿದ್ದೆವು ಆಗ ಸುಮಾರು ರಾತ್ರಿ 9.30 ಗಂಟೆ ಆಗಿತ್ತು. ಸದರಿ ಬಾಳೆಹೊನ್ನೂರು ಸರ್ಕಲ್ ಬಳಿ ಆರೋಪಿತರು ನಿಂತಿದ್ದರು. ಅವರು ನನಗೆ ಪರಿಚಯಸ್ಥರಾದ್ದರಿಂದ ಏನು ಶಬರಿ ಇಲ್ಲಿದ್ದಿಯಾ ಎಂದು ಕೇಳಿದೆ. ಆಗ ಆರೋಪಿತರು ಏಕಾಏಕಿ ಏನೋ ನನ್ನನ್ನು ಏಕವಚನದಿಂದ ಕರೆಯುತ್ತಿಯಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಮುಂದುವರೆದು ಆರೋಪಿತರು ತಮ್ಮ ಕೈಯಿಂದ ನನ್ನ ಎದೆಗೆ ಹೊಡೆದರು. ಆಗ ಚಾಸಾ-4 ರವರು ನನ್ನನ್ನು ಬಿಡಿಸಿಕೊಳ್ಳುವುದಕ್ಕಾಗಿ ಬಂದರು. ಆಗ ಆರೋಪಿತರು ಚಾಸಾ-4 ರವರ ಬಲಕೈಗೆ ಅದೇ ಬಿಯರ್ ಬಾಟಲಿನಿಂದ ಹೊಡೆದು ರಕ್ತಗಾಯ ಮಾಡಿದರು. ಅದೇ ಸಂದರ್ಭಕ್ಕೆ ಚಾಸಾ-5 ರವರು ಅಲ್ಲಿಗೆ ಬಂದಿದ್ದು, ಅವರು ಸಹ ಗಲಾಟೆ ಬಿಡಿಸಲು ಬಂದಿದ್ದು, ಅವರಿಗೂ ಸಹ ಆರೋಪಿತರು ಕಾಲಿನಿಂದ ಒದ್ದರು. ತದನಂತರ ನಾವು ಚಿಕಿತ್ಸೆಗಾಗಿ ಬಾಳೆ ಹೊನ್ನೂರಿನ ಸರ್ಕಾರಿ ಆಸ್ಪತ್ರೆಗೆ ಹೋದೆವು. ತದನಂತರ ಪೊಲೀಸರು ಆಸ್ಪತ್ರೆಗೆ ಆಗಮಿಸಿ ನಮ್ಮ

ಹೇಳಿಕೆಯನ್ನು ದಾಖಲು ಮಾಡಿಕೊಂಡರು. ಈಗ ಸಾಕ್ಷಿಯು ತಾನು ನೀಡಿದ ದೂರು ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿತರು ಅಧಿಕಾರಿಗಳ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಪಡೆದುಕೊಂಡು ಅನಾವಶ್ಯಕವಾಗಿ ಅವರಿಗೆ ತೊಂದರೆ ನೀಡುತ್ತಿದ್ದುದು ಸರಿಯಲ್ಲ ಎಂದು ನಾವು ತಿಳಿಸಿದ್ದರಿಂದ ಆರೋಪಿತರು ನಮ್ಮ ಮೇಲೆ ದ್ವೇಷ ಹೊಂದಿದ್ದರು. ಆ ಕಾರಣಕ್ಕಾಗಿ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದಿರುವ ಒಂದು ಒಡೆದ ಬಿಯರ್ ಬಾಟಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದೇ ಬಾಟಲಿಯಿಂದ ಘಟನಾ ದಿನದಂದು ಚಾಸಾ-4 ರವರ ಮೇಲೆ ಹಲ್ಲೆ ಮಾಡಿರುವುದಾಗಿ ನೋಡಿ ಗುರುತಿಸಿದ್ದು ಅದನ್ನು ಎಂಒ-1 ಎಂದು ಗುರುತಿಸಲಾಯಿತು.

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಕೆ ಎಸ್ ಎಸ್ ವಕೀಲರಿಂದಃಃ**

ನಾನು ಪದವೀಧರನಾಗಿರುತ್ತೇನೆ. ನಾನು ಕೃಷಿಕ. ಬಾಳೆಹೊನ್ನೂರಿನಿಂದ ಶೃಂಗೇರಿಯಲ್ಲಿರುವ ನಮ್ಮ ಮನೆಗೆ ಸುಮಾರು 40 ಕಿ ಮೀ ದೂರವಿದೆ ಎಂದರೆ ಸರಿ. ನನಗೆ ಆರೋಪಿತರು ಬಹಳ ವರ್ಷಗಳಿಂದ ಪರಿಚಯ. ಆರೋಪಿತರು ಸುಮುಖ ಮತ್ತು ನಟರಾಜ್ ಎಂಬುವವರಿಗೆ ಸಂಬಂಧಿಸಿದ ಜಮೀನಿನ ದಾಖಲೆಗಳು ಮತ್ತು ವಾಸದ ಮನೆಯ ದಾಖಲೆಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ತೆಗೆದುಕೊಂಡಿದ್ದರು. ನಟರಾಜ್ ನನ್ನ ಸಂಬಂಧಿ. ಸುಮುಖ ಈ ಪ್ರಕರಣದ ಸಾಕ್ಷಿದಾರರಾಗಿದ್ದಾರೆಂದರೆ ಸರಿ. ನಾನು ಮತ್ತು ಚಾಸಾ-2 ರಿಂದ 5 ನ್ಯಾಯಾಲಯಕ್ಕೆ ಒಟ್ಟಿಗೆ ಆಗಮಿಸಿದ್ದೆವು ಮತ್ತು ಒಟ್ಟಿಗೆ ಊಟಕ್ಕೆ ಹೋಗಿದ್ದೆವು ಎಂದರೆ ಸರಿಯಲ್ಲ. ಚಾಸಾ-4 ಮತ್ತು 5 ನನ್ನ ಸಂಬಂಧಿಕರಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**